ಈಚೆಗೆ ವಿಮಾನಯಾನದಲ್ಲಾದ ಒಂದು ಮಹತ್ವದ ಬದಲಾವಣೆಯನ್ನು ನನ್ನ ತಲೆಮಾರಿನವರು ಯಾರೂ ಗಮನಿಸಿಲ್ಲ ಎನ್ನಿಸುತ್ತದೆ. ಅನೇಕ ವಿಮಾನಾಶ್ರಯಗಳಲ್ಲಿ ಭದ್ರತಾ ತಪಾಸಣೆಯ ನಂತರ ಬ್ಯಾಗೇಜ್ ಟ್ಯಾಗಿಗೆ ಹಾಕುತ್ತಿದ್ದ ಮುದ್ರೆಯನ್ನು ಇಲ್ಲವಾಗಿಸಿದ್ದಾರೆ. ಹೈದರಾಬಾದು ವಿಮಾನಾಶ್ರಯದಲ್ಲಿ ಬೋರ್ಡಿಂಗ್ ಪಾಸಿಗೂ ಮುದ್ರೆಯಿಲ್ಲ. ಮುದ್ರೆಯೇ ಇಲ್ಲದಿದ್ದರೆ ಇದು ಎಂಥ ತಪಾಸಣೆ – ಮತ್ತು ಇದು ಎಂಥ ಅಧಿಕಾರದ ಪ್ರದರ್ಶನ? ಈ ಬಗ್ಗೆ ನಾವು ತುರ್ತಾಗಿ ಯೋಚಿಸಬೇಕಾಗಿದೆ.

ನಾನು ಮೊದಲ ಬಾರಿಗೆ ವಿಮಾನ ಹತ್ತಿದಾಗ ಆಗಿದ್ದ ಸಂಭ್ರಮ ಅಷ್ಟಿಷ್ಟಲ್ಲ. ಒಂದು ಗಂಟೆಗಿಂತಲೂ ಕಡಿಮೆ ಅವಧಿಯ ಯಾನಕ್ಕೆ ಆರ್ಥಿಕ ತಯಾರಿಯನ್ನೂ ಒಳಗೊಂಡು ನಡೆಸಿದ್ದ ತಯಾರಿಯಲ್ಲಿ ಭದ್ರತಾ ತಪಾಸಣೆಯೂ ಸೇರಿತ್ತು. ಜೇಬನ್ನು ಒತ್ತಿ, ಕುಂಡೆಯನ್ನು ತಟ್ಟಿ, ಮೈಮೇಲೆಲ್ಲಾ ಕೈಯ್ಯಾಡಿಸುವ ಮುಜುಗರವನ್ನು ಪ್ರದರ್ಶಿಸಲೋ ಎಂಬಂತೆ ಪರೀಕ್ಷೆಯ ನಂತರ ಚೀಟಿಗೊಂದು ಮುದ್ರೆಯ ಘನತೆ ಬರುತ್ತಿತ್ತು. ವಿಮಾನಾಶ್ರಯದಲ್ಲಿ ಕದ್ದು ತಂದು ಭದ್ರತಾ ತಪಾಸಣೆಯ ಚೀಟಿಗಳನ್ನು ಚೀಲಕ್ಕೆ ಕಟ್ಟಿ – 'ನಾನೂ ವಿಮಾನಯಾನ ಮಾಡಿದೆ' ಎನ್ನುವ ಸುಳ್ಳು ಭ್ರಮೆಯನ್ನು ತಪ್ಪಿಸುವುದಕ್ಕೆ ಈ ಮುದ್ರೆ ಮುಖ್ಯವಾದ ಸಂಕೇತವಾಗಿತ್ತು. ಈ ಭದ್ರತಾ ತಪಾಸಣೆಯ ಚೀಟಿ ಮತ್ತು ತಾರೀಖು ಕಾಣಿಸದಂತಹ ಅದರ ಮುದ್ರೆಯನ್ನು ಬ್ಯಾಗಿನಿಂದ ತೆಗೆಯದೇ ತಿಂಗಳುಗಳ ಕಾಲ ಕಳೆಯುತ್ತಿದ್ದೆವು. ಆದರೆ ಚೀಟಿಯ ಮೇಲೆ ಮುದ್ರೆಯಿಲ್ಲದಿದ್ದರೆ ಅದು ನಿಜವಾದದ್ದು ಎಂದು ತಿಳಿಯುವುದಾದರೂ ಹೇಗೆ?

ಒಂದು ಕಾಗದದ ತುಂಡು ಒಂದು ದಾಖಲೆಯಾಗಿ ಪರಿವರ್ತನೆಗೊಳ್ಳುವುದೇ ಈ ಮುದ್ರೆಯಿಂದಾಗಿ ಎಂದು ವಿಮಾನಾಶ್ರಯದ ಭದ್ರತೆಯ ವಿಭಾಗದವರಿಗೂ, ಹಾಗೂ ಅನೇಕ ಸಂದರ್ಭಗಳಲ್ಲಿ ಮುದ್ರೆಯನ್ನಿಲ್ಲವಾಗಿಸುತ್ತಿರುವ ಇತರರಿಗೂ ಯಾಕೆ ಅರ್ಥವಾಗುತ್ತಿಲ್ಲ? ಈ ಮುದ್ರೆ ಎನ್ನುವುದು ಸರಳವಾದ ಮಾತೇನೂ ಅಲ್ಲ. ದೇಶ ರಕ್ಷಿಸುತ್ತಿರುವ ಸೈನಿಕರು, ನಾಗರಿಕರನ್ನು ರಕ್ಷಿಸುತ್ತಿರುವ ಪೊಲೀಸರು – ಈ ಎಲ್ಲರಿಗೂ ಒಂದು ಅಧಿಕಾರದ ಗತ್ತು–ಘನತೆ ಉಂಟಾಗುವುದೇ ಅವರ ವರ್ದಿಯಿಂದ, ಅವರ ಬಳಿಯಿರುವ ಲಾಠಿಯಿಂದ. ಮಹಾನಾಯಕರಾಗಿ ಮೆರೆಯುವಾಗ ತಮ್ಮ ಸುತ್ತಲೂ ಗಿರ್ಕಿ ಹೊಡೆಯುವ ಸ್ಟೆನ್‌ಗನ್‌ಧಾರಿಗಳ ಗತ್ತಿನಿಂದ. ಆ ಬೂಟಿನ ಸಪ್ಪಳದಿಂದ, ಆ ಬೆಲ್ಟಿನ ಅಗಲದಿಂದ, ಭುಜದ ಮೇಲಿನ ಆ ನಕ್ಷತ್ರಗಳಿಂದ... ಈ ಎಲ್ಲ ಲಾಂಛನಗಳನ್ನೂ ತೆಗೆದುಬಿಟ್ಟರೆ ಅಧಿಕಾರ ಎಲ್ಲಿಂದ ಬಂತು, ಹಾಗೂ ಅಪ್ರೂವಲ್ ಎಲ್ಲಿಂದ ಬರುತ್ತದೆ. ಒಬ್ಬ ಸೈನಿಕನ ವರ್ದಿಯನ್ನು ಇಲ್ಲವಾಗಿಸಿದಷ್ಟೇ ಮಹತ್ವದ ಮಾತು ಈ ಮುದ್ರೆಯಿಲ್ಲದ ಬ್ಯಾಗೇಜ್ ಟ್ಯಾಗು.

ಮುದ್ರೆಯ ಹಿನ್ನೆಲೆ ಇಂದಿನದ್ದಲ್ಲ. ಹಾಗೂ ಮುದ್ರೆಯ ಮೇಲಿರುವ ನಂಬಿಕೆಯೂ ಸರಳವಾದದ್ದೇನೂ ಅಲ್ಲ. ಅದು ನಮ್ಮ ದೇಶಕ್ಕೇ ಸೀಮಿತವಾದದ್ದೂ ಅಲ್ಲ. ನಾನು ಕಾಲೇಜಿನಲ್ಲಿದ್ದಾಗ ವಿದೇಶಕ್ಕೆ ಹೋಗಬೇಕೆಂದಿದ್ದ ಗೆಳೆಯನೊಬ್ಬ ತನ್ನ ಪರಿಕರಗಳನ್ನು ಪ್ರದರ್ಶಿಸಿದ್ದ – "ನೋಡು ನಾನು ವಿದೇಶೀ ವಿಶ್ವವಿದ್ಯಾಲಯಗಳಿಗೆ ಅರ್ಜಿ ಹಾಕುತ್ತಿದ್ದೇನೆ, ಇದಕ್ಕೆ ಏನೆಲ್ಲಾ ತಯಾರಿ ಮಾಡಬೇಕಿದೆ..."

ಅವನ ಬಳಿಯಿದ್ದ ಪರಿಕರಗಳಲ್ಲಿ ಲೇಖನಿ, ಅರ್ಜಿ ಫಾರ್ಮುಗಳು ಒಂದೆಡೆಯಾದರೆ ಲಕೋಟೆ, ಲಕ್ಕದಸೀಲು ಮತ್ತು ಮುದ್ರೆಯೂ ಇತ್ತು. "ಈ ಅಮೆರಿಕದ ವಿಶ್ವವಿದ್ಯಾಲಯಗಳಿಗೆ ಬುದ್ಧಿಯಿಲ್ಲ. ನನ್ನ ಅಂಕಪಟ್ಟಿಯ ಪ್ರತಿಗಳನ್ನು ವಿಶ್ವವಿದ್ಯಾಲಯವೇ ನೇರವಾಗಿ ಅವರಿಗೆ ಕಳಿಸಿಕೊಡಬೇಕಂತೆ. ಅವರು ಯಾವತ್ತಾದರೂ ನಮ್ಮ ರಿಜಿಸ್ಟ್ರಾರ್ ಆಫೀಸಿಗೆ ಬಂದಿದ್ದರೆ ಅದು ಎಷ್ಟು ಅಸಾಧ್ಯ